ಸ್ಲಂ ಮತ್ತು ರೆಡ್ ಲೈಟ್ ಏರಿಯಾಗಳಲ್ಲಿ ಫ್ರೀ ಮೆಡಿಕಲ್ ಕ್ಯಾಂಪ್ ನಡೆಸ್ತಾಳೆ. ಅಂದಹಾಗೆ, ಆಕೆ ಹುಟ್ಟಿ ಬೆಳೆದಿದ್ದು ಧಾರಾವಿ ಸ್ಲಂನಲ್ಲಿಯೇನಂತೆ. 'ದಿ ಯೂಸೇಜ್ ಆಫ್ ಕಾಂಡೋಮ್ ಇನ್ ಧಾರಾವಿ ಸ್ಲಂ ಅಂಡ್ ನಾಗ್ಪಾಡ್ ರೆಡ್ ಲೈಟ್ ಏರಿಯಾ' ಎಂಬ ಥೀಸಿಸ್‌ಗೆ ದಿಲ್ಲಿಯ ಜೆ.ಎನ್. ಯು.ನಿಂದ ಎಂ.ಫಿಲ್. ಸಿಕ್ಕಿದೆ. ಆಕೆಯ ನೋಟ ಮತ್ತು ಮಾತುಗಳೇ ಅನೇಕರಿಗೆ ಮೆಡಿಸಿನ್ ರೀತಿಯಲ್ಲಿ ಕೆಲಸ ಮಾಡಿ ಧೈರ್ಯ ತುಂಬುತ್ತವೆ. ಆಕೆಯ ಕೌನ್ಸೆಲಿಂಗ್‌ನಿಂದ ತೀರಾ ಡಿಪ್ರೆಶನ್‌ಗೆ ಹೋಗಿದ್ದವರು ಕೂಡ ಫೀನಿಕ್ಸ್ ಪಕ್ಷಿಯಂತೆ ಮೈಗೊಡವಿ ಯಶಸ್ಸಿನ ಮೆಟ್ಟಿಲೇರಿ ಸಂಭ್ರಮಿಸಿದ್ದಾರೆ. ಹೋದ ಸಾರಿ ಫ್ಲಡ್ಸ್ ಆದಾಗ ಒಂದು ದಿನ ಇಲ್ಲಿಗೆ ಬಂದಿದ್ರು. ನಮ್ಮ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್‌ಗೂ ಭೇಟಿ ನೀಡಿದ್ದರು. ತುಂಬಾ ಸಿಂಪಲ್ ಹೆಂಗಸು, ನಮ್ಮ ಸಿಂಧು ಮೆನನ್ ತರ. ನೀವು ದಿಲ್ಲಿಗೆ ಹೋದರೆ ಭೇಟಿಯಾಗಬಹುದು. ಸಿಂಧು ಮೆನನ್ ಮತ್ತು ನಾನು ಸುಮಾರು ವಯಸ್ಸಿನ ಅಂತರವಿದ್ದರೂ ತುಂಬಾ ಕ್ಲೋಸ್ ಫ್ರೆಂಡ್ಸ್. ಸಿಂಧು ಮೆನನ್‌ನ ಏರ್‌ಪೋರ್ಟ್‌ಗೆ ಬಿಟ್ಟು ಬರಲಿಕ್ಕೆ ನಾನೂ ರೆಡಿಯಾಗಿದ್ದೀನಿ, ಎಂಟೂವರೆಗೆ ಫ್ಲೈಟ್...' ಭಗವಾನ್ ಕುಟ್ಟಿ ನನ್ನನ್ನು ಕರೆಯುವುದರೊಂದಿಗೆ ಅರುಂಧತಿ ಮಾತು ನಿಲ್ಲಿಸಿದ್ದಳು. ಅರುಂಧತಿ ಮತ್ತು ಸಿಂಧು ಮೆನನ್ ಇಬ್ಬರ ನಗೆಯಲ್ಲೂ ನಾನು ಸಂಪೂರ್ಣ ಕರಗಿಹೋಗಿದ್ದೆ.

ಎರ್ನಾಕುಲಂನ ಕೆ.ಎಮ್. ನಯ್ಯಾರರ ಮನೆ ತಲುಪಿದಾಗ ರಾತ್ರಿ ಎಂಟೂವರೆ ಗಂಟೆಯಾಗಿತ್ತು. ಗುಡ್ಡದ ಮೇಲೆ ಎತ್ತರದಲ್ಲಿದ್ದ ಅರಮನೆಯಂಥ ಮನೆ. ಇಡೀ ಮನೆ ಹವಾನಿಯಂತ್ರಿತವಾಗಿತ್ತು. ಅದೊಂದು ಅತ್ಯಂತ ಶ್ರೀಮಂತರೊಬ್ಬರ ಮನೆಯೆಂದು ಕಣ್ಣೋಟವೊಂದರಲ್ಲೇ ಹೇಳಬಹುದಿತ್ತು. ಮನೆಯ ಸಂಪೂರ್ಣ ಇಂಟೀರಿಯರ್ ಕೆಲಸವನ್ನು ಟೀಕ್ ಮರದಿಂದಲೇ ಮಾಡಲಾಗಿತ್ತು. ಅತಿಥಿಗಳಿಗಾಗಿಯೇ ಮೀಸಲಾಗಿರಿಸಿದ್ದ ಕೊಠಡಿಯಲ್ಲಿ ನನ್ನ ಲಗೇಜ್ ಇರಿಸಿ ಫ್ರೆಶಪ್ ಆಗಿದ್ದೆ. ತನ್ನ ಸ್ವಂತ ಮನೆಯೆಂಬಂತೆ ಓಡಾಡುತ್ತಿದ್ದ ಭಗವಾನ್ ಕುಟ್ಟಿ ಬಂದು ನನ್ನನ್ನು ಕೆ.ಎಮ್. ನಯ್ಯಾರ್ ಇದ್ದ ದೊಡ್ಡ ಕೊಠಡಿಗೆ ಕರೆದುಕೊಂಡು ಹೋಗಿದ್ದರು. ಕೆ.ಎಮ್. ನಯ್ಯಾರ್ ವಜ್ರಾಸನದಲ್ಲಿ ಕುಳಿತಿದ್ದರು. ನನ್ನನ್ನು ಸೋಫಾದ ಮೇಲೆ ಕುಳಿತುಕೊಳ್ಳಲು ಹೇಳಿದ್ದರು. ಕೊಠಡಿಯ ನಾಲ್ಕು ಗೋಡೆಗಳಿಗೂ ಕಾರ್ಲ್ ಮಾರ್ಕ್ಸ್, ಲೆನಿನ್, ಮಾವೋತ್ಸೆ ತುಂಗಾ ಮತ್ತು ಗಾಂಧಿಯ ದೊಡ್ಡ ದೊಡ್ಡ ಫೋಟೋಗಳು! ನಾಲ್ವರೂ ಗೋಡೆಯಿಂದ ಎದ್ದು ಬರುತ್ತಿದ್ದಾರೇನೋ ಎಂಬಂತೆ ವಿನ್ಯಾಸ ಮಾಡಲಾಗಿತ್ತು. ಕೆ.ಎಮ್. ನಯ್ಯಾರ್ ಥೇಟ್ ಸುಧೀಂದ್ರ ನಯ್ಯಾರ್ ತರಹವೇ ಕಾಣುತ್ತಿದ್ದರು. ಸುಧೀಂದ್ರ ನಯ್ಯಾರ್‌ಗಿಂತ ಹತ್ತು ವರ್ಷ ಚಿಕ್ಕವರೆಂದು ಹೇಳಲು ಸಾಧ್ಯವಿಲ್ಲದಿರುವಂತೆ ಕಾಣುತ್ತಿದ್ದರು.

'ನೀವೂ ಕಮ್ಯುನಿಸ್ಟರಾ.' ಅವರ ಮುಂದಿನ ಸೋಫಾದಲ್ಲಿ ನಾನು ಕುಳಿತುಕೊಳ್ಳುತ್ತಿರುವಾಗ ಕೇಳಿದ್ದರು.

'ಹಾಗೇನಿಲ್ಲ, ಕಮ್ಯುನಿಸ್ಟ್ ಸಿದ್ಧಾಂತಗಳು ಯಾರಿಗೆ ಇಷ್ಟವಾಗುವುದಿಲ್ಲ ಹೇಳಿ...' ಮನಃಪೂರ್ವಕವಾಗಿಯೇ ಉತ್ತರಿಸಿದ್ದೆ. 'ಹೀಗೆ ಕೇಳಿದೆನೆಂದು ಬೇಸರಿಸಬೇಡಿ, ಕ್ರಾಂತಿ ಕಿರಣ್ ಅಂತ ಹೆಸರಿಟ್ಟುಕೊಂಡಿದ್ದೀರಲ್ಲ, ಹಾಗಾಗಿ ಕೇಳಿದೆ. ಸಾಮಾನ್ಯವಾಗಿ ಕ್ರಾಂತಿ ಗೀಂತಿ ಅಂತ ಹೆಸರಿಟ್ಟುಕೊಳ್ಳೋರು ಅಂತಹವರೇ...' ನಗುವಾಗ ಅವರ ಕಣ್ಣುಗಳು ಕಿರಿದಾಗಿದ್ದವು.

'ಅವರವರ ಹೆಸರುಗಳನ್ನು ಅವರವರೇ ಇಟ್ಟುಕೊಳ್ಳಲು ಎಲ್ಲಿ ಸಾಧ್ಯ. ಅಪ್ಪ ಸೋಷಿಯಲಿಸಂನ ತುಂಬಾ ಇಷ್ಟಪಡ್ತಿದ್ರಂತೆ. ನಿಮ್ಮ ತಂದೆ ನಿಮಗೆ ಕಾರ್ಲ್ ಮಾರ್ಕ್ಸ್ ಹೆಸರು ಇಟ್ಟಂತೆ' ಥಟ್ಟನೆ ಉತ್ತರಿಸಿದ್ದೆ'.

'ಎಕ್ಸಾಕ್ಟ್ಲೀ' ಅವರ ಕಣ್ಣಿನ ತೀಕ್ಷ್ಣತೆ ಮತ್ತಷ್ಟು ಜಾಸ್ತಿಯಾಗಿತ್ತು.

'ಇವೊತ್ತು ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್‌ಗೆ ಭೇಟಿ ನೀಡಿದ್ದೆ. ನಿಮ್ಮ ಬ್ರದರ್ ಸುಧೀಂದ್ರರನ್ನೂ ಮಾತನಾಡಿಸಿಕೊಂಡು ಬಂದೆ. ನಿಜಕ್ಕೂ ಮಾರ್ವೆಲಸ್ ಕೆಲಸ. ಅಭಿನಂದನೆಗಳು ನಿಮಗೆ'. ಖುಷಿಯಿಂದಲೇ ಹೇಳಿದ್ದೆ. 'ಓಹ್ ನನ್ನ ಬಗ್ಗೆ ರಾಘವರೆಡ್ಡಿ, ಮಾಧವನ್ ಪಿಳ್ಳೈ, ಭಗವಾನ್ ಕುಟ್ಟಿ, ಡಾ. ಅರುಂಧತಿ ಪಿಳ್ಳೈ ಎಲ್ಲರೂ ಹೇಳಿರಬೇಕು. ನಾನೇನೂ ಅಸಾಮಾನ್ಯನಲ್ಲ. ನಾನೂ ಒಬ್ಬ ಬಡವ. ನನ್ನನ್ನು ನೋಡಿದರೆ ಶ್ರೀಮಂತನಂತೆ ಕಾಣ್ತೇನಾ? ಇಷ್ಟಕ್ಕೂ ಒಬ್ಬ ವ್ಯಕ್ತಿಯನ್ನು ನೋಡಿ ಆ ವ್ಯಕ್ತಿ ಶ್ರೀಮಂತನೋ ಅಲ್ಲವೋ ಎಂದು ತೀರ್ಮಾನಕ್ಕೆ ಬರಲು ಸಾಧ್ಯವಾ? ನೀವು ಎಕನಾಮಿಕ್ಸ್ ಓದಿದೋರು, ಸಂಪತ್ತಿನ ಡೆಫಿನೆಷನ್ ನಿಮಗೆ ಚೆನ್ನಾಗಿ ತಿಳಿದಿರುತ್ತದೆ.' ಅವರ ಮಾತುಗಳಿಂದಲೇ ತುಂಬಾ ಓದಿಕೊಂಡಿದ್ದಾರೆಂಬ ಸಂಗತಿ ಅರಿಯಬಹುದಿತ್ತು.

'ಮನುಷ್ಯನ ಅಗತ್ಯಗಳನ್ನು ಪೂರೈಸುವ ಅಥವಾ ಬಯಕೆಗಳನ್ನು ತೃಪ್ತಿಪಡಿಸುವ ಬೆಲೆಯುಳ್ಳ ಎಲ್ಲಾ ಸರಕು ಸೇವೆಗಳನ್ನೂ ಅರ್ಥಶಾಸ್ತ್ರದಲ್ಲಿ ಸಂಪತ್ತು ಎಂದು ಕರೆದರೂ ಪ್ರಸ್ತುತ ಸಂಪತ್ತಿಗೆ ಒಂದು ನಿರ್ದಿಷ್ಟವಾದ ಅರ್ಥ ಕೊಡಲು ಸಾಧ್ಯವಾಗದ ಸ್ಥಿತಿಗೆ ನಾವಿಂದು ತಲುಪಿದ್ದೇವೆ'. ತಾರ್ಕಿಕವಾಗಿ ಮಾತನಾಡಲು ಪ್ರಯತ್ನಿಸಿದ್ದೆ.

'ನೋಡಿ ನಾನು ವಜ್ರಾಸನದಲ್ಲಿ ಕುಳಿತಿದ್ದೇನೆ. ಈ ಕ್ರಿಯೆ ನನ್ನ ದೇಹವನ್ನು ಹಗುರ ಮಾಡಿ ಖುಷಿ ಕೊಡುತ್ತದೆ. ಇದನ್ನೂ ನಾನು ಸಂಪತ್ತು ಎಂದೇ ಕರೆಯುತ್ತೇನೆ. ತೃಪ್ತಿ ಕೊಡುವ ಆಹಾರವನ್ನಾಗಲೀ, ಕಾಮವನ್ನಾಗಲೀ ಇಂದು ಯಾರೂ ಸಂಪತ್ತೆಂದು ಪರಿಗಣಿಸುವುದೇ ಇಲ್ಲ. ಹಣ, ಚಿನ್ನ, ಸಿಮೆಂಟ್ ಬಿಲ್ಡಿಂಗುಗಳನ್ನು ಇವೊತ್ತು ಜನ ಸಂಪತ್ತೆಂದು ಒಪ್ಪಿಕೊಂಡಿದ್ದಾರೆ. ಪ್ರಸ್ತುತ ಸಂಪತ್ತು ಇಲ್ಲ ಅನ್ನೋ ಚಿಂತೆಗಿಂತಲೂ ಸಂಪತ್ತನ್ನು ದಾಸ್ತಾನು ಮಾಡೋ ಚಿಂತೆ ಇದೆಯಲ್ಲಾ, ಅದೇ ಮನುಷ್ಯನಿಗೆ ಕ್ರೂರ ವ್ಯಾಧಿಯಾಗಿ ಪರಿಣಮಿಸಿದೆ. ನನ್ನ ವಿಷಯದಲ್ಲೇ ಹೇಳೋದಾದರೆ ಕೊಚ್ಚಿಯಲ್ಲಿರುವ ನನ್ನ ಎರಡು ದೊಡ್ಡ ಅಪಾರ್ಟ್‌ಮೆಂಟ್‌ಗಳ ಕಥೇನ ಹೇಳಲೇಬೇಕು. ಕೊಚ್ಚಿಯ ಚಿಲವನ್ನೂರ್ ನದಿಯ ದಡದಲ್ಲಿ ಕಟ್ಟಿರುವ ಐದು ಬ್ಯೂಟಿಫುಲ್ ಅಪಾರ್ಟ್‌ಮೆಂಟ್‌ಗಳಲ್ಲಿ ಜ್ಯೂವೆಲ್ ಹೋಮ್ಸ್ ಹಾಗೂ ಪರ್ಲ್ ಗಾರ್ಡನ್ ವ್ಯೂ ಅಪಾರ್ಟ್‌ಮೆಂಟ್ ನಮ್ಮ ಕಂಪನಿಯವು. ನಿಮಗೆ ಗೊತ್ತಿದೆಯೋ ಇಲ್ಲವೋ ದೇಶದಲ್ಲಿ ನೋಟು ಅಮಾನ್ಯೀಕರಣದ ನಂತರ ದೇಶಾದ್ಯಂತ ರಿಯಲ್ ಎಸ್ಟೇಟ್ ಬಿಸಿನೆಸ್‌ನಲ್ಲಿ ವಿಪರೀತ ನಷ್ಟವುಂಟಾಗಿ ನೂರಾರು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಂದು ವ್ಯವಸ್ಥೇನ ಇದ್ದಕ್ಕಿದ್ದಂತೆ ತುಂಬಾ ಟೈಟ್ ಮಾಡಿದರೆ ಅದರಿಂದ ಉಂಟಾಗುವ ಫಲಿತಾಂಶಗಳು ಘೋರವಾಗಿಯೇ ಇರುತ್ತವೆ. ಒಂದು ಅಣೆಕಟ್ಟು ಕಟ್ಟುವಾಗ ನೀರು ಸೀಪೇಜ್‌ಗೆ ಪ್ರಾವಿಷನ್ ಇಡಲಾಗುತ್ತದೆ. ಇಲ್ಲದಿದ್ದಲ್ಲಿ ನೀರಿನ ಡೆನ್ಸಿಟಿ ಮತ್ತು ಒತ್ತಡವನ್ನು ತಾಳಲಾರದೆ ಅಣೆಕಟ್ಟು ಬೇಗ ಒಡೆದುಹೋಗುವ ಸಂಭವವೇ ಹೆಚ್ಚು. ಹಾಗಾಗಿ ಯಾವುದೇ ವ್ಯವಸ್ಥೆಯಲ್ಲಿಯೂ ಸ್ವಲ್ಪ ಲೂಪ್ ಹೋಲ್ಸ್ ಇರಲೇಬೇಕು. ರಿಯಲ್ ಎಸ್ಟೇಟ್ ಬಿಸಿನೆಸ್ ಕುಸಿದು ಲಕ್ಷಾಂತರ ಜನ ನಿರುದ್ಯೋಗಿಗಳಾಗಿದ್ದಾರೆ. ಅಂತಹುದರಲ್ಲಿ ಆ ನೆಲ್ಸನ್ ನಮಗೆ ದೊಡ್ಡ ತಲೆನೋವು ತಂದಿಟ್ಟು ಬಿಟ್ಟ...' ಎಂದು ಕೆ.ಎಮ್. ನಯ್ಯಾರ್ ವಜ್ರಾಸನದಿಂದ ಎದ್ದು ಮಾಮೂಲಿಯಾಗಿ ಮೆತ್ತನೆಯ ಸೋಫಾದ ಮೇಲೆ ಕುಳಿತುಕೊಳ್ಳುವುದಕ್ಕೂ ಭಗವಾನ್ ಕುಟ್ಟಿ ವಿಸ್ಕಿಯನ್ನು ಬೆರೆಸಿದ ಎರಡು ಗ್ಲಾಸುಗಳನ್ನು ತಂದು ಟೀಪಾಯ್ ಮೇಲೆ ಇಡುವುದಕ್ಕೂ ಒಂದೇ ಆಗಿತ್ತು.

'ಭಗವಾನ್ ಇನ್ನು ಮುಕ್ಕಾಲು ಗಂಟೆಗೆ ಊಟಕ್ಕೆ ರೆಡಿ ಮಾಡು. ಸರ್‌ಗೆ ಏನು ಬೇಕೋ ಕೇಳು. ನನಗೆ ಒಂದು ಬೌಲ್ ಮೊಸರನ್ನ, ಒಂದು ಬೌಲ್ ಫಿಶ್ ಕರಿ ಆದರೆ ಸಾಕು ...' ಎಂದು ನನ್ನ ಕಡೆ ನೋಡಿದ್ದರು. 'ನನಗೂ ಅಷ್ಟೇ ಸಾಕು...' ಎಂದಿದ್ದೆ ನಾನು ಭಗವಾನ್ ಕುಟ್ಟಿಯ ಮುಖ ನೋಡುತ್ತಾ. ಅಷ್ಟರಲ್ಲಿ ಪಕ್ಕದಲ್ಲೇ ಇದ್ದ ಲ್ಯಾಂಡ್ ಫೋನ್ ರಿಂಗಾಗಿತ್ತು. ಕೆ.ಎಮ್. ನಯ್ಯಾರ್ ರಿಸೀವರ್ ಎತ್ತಿ ಮಾತನಾಡಿದ್ದರು.

'ಹ್ಯಾಪಿ ಜರ್ನಿ ಬೇಬಿ. ಆಯ್ತು ಮುಂದಿನ ವಾರದವರೆಗೂ ಇದ್ರೆ ನಾನೂ ಬರ್ತೀನಿ. ಆಗ್ರಾಗೆ ಹೋಗ್ಬಿಟ್ ಬರೋಣ...' ಎಂದು ಫೋನಿನಲ್ಲಿ ಮಾತು ಮುಗಿಸಿ ನನ್ನ ಕಡೆ ನೋಡುತ್ತಾ, 'ಅದೇ ನಮ್ಮ ಸಿಂಧು ಏರ್‌ಪೋರ್ಟ್‌ನಿಂದ ಫೋನ್ ಮಾಡ್ತಿದಾಳೆ. ಡೆಲ್ಲಿಗೆ ಹೊರಟಿದ್ದಾಳೆ. ಬಂಗಾರದಂಥ ಹುಡುಗಿ...' ಎಂದು ಭಗವಾನ್ ಕುಟ್ಟಿಯ ಕಡೆ ದೃಷ್ಟಿ ಹರಿಸಿದ್ದರು. 'ವಿಸ್ಕಿ ಜೊತೆಗೆ ಫಿಶ್ ತರ್ತೀನಿ...' ಎಂದು ಭಗವಾನ್ ಕುಟ್ಟಿ ಕಿಚನ್ ಕಡೆ ಹೊರಟುಹೋಗಿದ್ದ. 'ಅಂಥ ಬಂಗಾರದಂಥ ಹುಡುಗಿ ಇಂಥ ಶನಿಗೆ ಗಂಟು ಬಿದ್ದಳಲ್ಲಾ ಅನ್ನೋ ಸಂಕಟ ನನಗೆ ...' ಎಂದು ಹೇಳಿ ಗೋಡೆಗೆ ಹಾಕಿದ್ದ ಎಲ್ಲಾ ಫೋಟೋಗಳ ಕಡೆಗೊಮ್ಮೆ ನೋಡಿ, ವಿಸ್ಕಿ ಗ್ಲಾಸ್ ಎತ್ತಿಕೊಂಡು ಚಿಯರ್ಸ್ ಹೇಳಿ ಬಾಯಿಗಿಟ್ಟುಕೊಂಡಿದ್ದರು.

(ಸಶೇಷ)